ಶಿಕ್ಷಕರ ಮತ್ತು ಪೋಷಕರ ಅಂಕಣ

# ಮೌಲ್ಯಗಳ ಅರಿವು

## ಮೌಲ್ಯಗಳ ಮಹತ್ವ

ಮೌಲ್ಯ ಅಥವಾ **value** ಎಂಬ ಪದಕ್ಕೆ ಹಲವು ಅರ್ಥಗಳಿವೆ. ೧. ಹಣದಿಂದ ಕೊಳ್ಳಬಹುದಾದುದು ೨. ಉಪಯೋಗಕರವಾದುದು ಅಥವಾ ಮುಖ್ಯವಾದುದು ೩. ಸರಿತಪ್ಪುಗಳ ಮತ್ತು ಜೀವನದಲ್ಲಿ ಪ್ರಮುಖವಾದುದರ ಬಗ್ಗೆ ನಂಬಿಕೆ. ಪರಿಸ್ಥಿತಿಗೆ ಅನುಸಾರವಾಗಿ ಮೌಲ್ಯಗಳು ಮೇಲಿನ ಅರ್ಥಗಳನ್ನು ಮತ್ತು ಇನ್ನೂ ಹಲವು ಬಗೆಯ ಅರ್ಥಗಳನ್ನು ಪಡೆದುಕೊಳ್ಳಬಹುದು.

**ಭಾರತೀಯ ಸಂಸ್ಕೃತಿಯಲ್ಲಿ ಮೌಲ್ಯಗಳು:** ಭಾರತೀಯ ಪರಂಪರೆಯಲ್ಲಿ ಪ್ರಾಚೀನ ಕಾಲದಿಂದಲೂ ಎರಡು ಹಂತಗಳ ಮೌಲ್ಯಗಳಿವೆ. ಅವುಗಳನ್ನು ಪುರುಷಾರ್ಥಗಳು ಎಂದು ಕರೆಯುತ್ತಾರೆ. ಕೆಳಗಿನ ಹಂತದ ಮೌಲ್ಯಗಳೆಂದರೆ, **ಕಾಮ, ಅರ್ಥ ಮತ್ತು ಧರ್ಮ**. ಕಾಮವೆಂದರೆ ಬಯಕೆ, ಅರ್ಥವೆಂದರೆ ಸಂಪತ್ತು, ಧರ್ಮವೆಂದರೆ ನೈತಿಕತೆ. ಧರ್ಮದಲ್ಲಿ ನೆಲೆಗೊಳ್ಳದೆಯೆ, ಅರ್ಥ ಮತ್ತು ಕಾಮಗಳನ್ನು ಗಳಿಸುವ ಪ್ರಯತ್ನ ದಿಕ್ಕುಗೆಡಿಸುತ್ತದೆ. ಅದರಿಂದ, ಮೋಸ, ವಂಚನೆ, ಒತ್ತಡ, ಘರ್ಷಣೆ ಮತ್ತು ವ್ಯಕ್ತಿತ್ವದ ವಿಭಜನೆ ಉಂಟಾಗುತ್ತದೆ. ಕಾಮ ಮತ್ತು ಅರ್ಥಗಳಲ್ಲಿ ವೈರಾಗ್ಯ ತಳೆದ ವ್ಯಕ್ತಿ ಮಾತ್ರವೇ ಮೋಕ್ಷವನ್ನು ಪಡೆಯಲು ಶಕ್ತನಾಗುತ್ತಾನೆ. ಮೋಕ್ಷವೆಂದರೆ, ಕಾಮದಿಂದ ಉಂಟಾದ ಸಂಸಾರ ಚಕ್ರದ ಬಿಡುಗಡೆ. ಹಾಗೆಯೇ ಮೋಕ್ಷವೆಂದರೆ, ಯಾವ ಬಾಹ್ಯ ಪರಿಸ್ಥಿತಿಯಿಂದಲೂ ಬಾಧಿತವಾಗದ ನಿತ್ಯ ಆನಂದ, ಶಾಂತಿಗಳ ಗಳಿಕೆ ಕೂಡ.

**ಮೌಲ್ಯಗಳೆಂದರೆ ಗುಣಗಳು:** ಚಾರಿತ್ರ್ಯ ನಿರ್ಮಾಣದಲ್ಲಿ ಮೌಲ್ಯಗಳೆಂದರೆ, ನೈತಿಕ ನಿಯಮಗಳನ್ನು ಪಾಲಿಸುವುದು. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದನ್ನು ಬಯಸಬೇಕು, ಯಾವುದನ್ನು ತ್ಯಜಿಸಬೇಕು – ಇವುಗಳ ಬಗ್ಗೆ ನಮ್ಮ ಕೆಲಸಕಾರ್ಯಗಳಲ್ಲಿ ಅವು ಮಾರ್ಗದರ್ಶನ ತೋರುತ್ತವೆ. ಮೌಲ್ಯಗಳು ವ್ಯಕ್ತಿಯೊಬ್ಬನ ಅಂತರಂಗದಲ್ಲಿದ್ದುಕೊಂಡೇ, ಅವನ ಜೀವನ ಮತ್ತು ನಡವಳಿಕೆಗಳನ್ನು ನಿಯಂತ್ರಿಸುತ್ತವೆ. ಈ ಬಗೆಯ ನಿಯಂತ್ರಣವು ಮಾನವ ವಿಕಾಸದ ಆದರ್ಶವನ್ನು ಸಾಧಿಸಲು ಅವನಿಗೆ ಅನುವು ಮಾಡಿಕೊಡುತ್ತದೆ. ಈ ಬಗೆಯ ನೈತಿಕ ಸಾಮರ್ಥ್ಯವು ಒಬ್ಬ ವ್ಯಕ್ತಿಯಲ್ಲಿ ಪ್ರೀತಿ, ನಿಃಸ್ವಾರ್ಥತೆ, ಶಾಂತಿ ಮತ್ತು ಸುಖಗಳನ್ನು ತಂದುಕೊಡುತ್ತದೆ.

## ನೈತಿಕತೆಯ ಉದ್ದೇಶ

**ಮೌಲ್ಯಗಳು ಆಧ್ಯಾತ್ಮಿಕ ಉನ್ನತಿಗೆ ಸಾಧನಗಳು:** ಮೌಲ್ಯಗಳೇ ಅಂತಿಮ ಗುರಿಯಲ್ಲ. ಅವು ಜೀವನದಲ್ಲಿ ಗುಣಮಟ್ಟ, ಉತ್ಕೃಷ್ಟತೆ ಮತ್ತು ಸಾರ್ಥಕತೆಗಳನ್ನು ಅನ್ವೇಷಿಸಲು ನಮ್ಮನ್ನು ಪ್ರೇರೇಪಿಸುತ್ತವೆ. ಆದರೆ ಅವೇ ನಿತ್ಯವಾದ ಸುಖ, ಸಂತೃಪ್ತಿಗಳನ್ನು ನೀಡಲಾರವು. ಅದಲ್ಲದೆ, ನೈತಿಕ ನಿಯಮಗಳ ಪಾಲನೆ ಮಾತ್ರವೆ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವಾಗಲಾರದು. ವೈಯಕ್ತಿಕ ಮತ್ತು ಸಾಮಾಜಿಕ ವಿಕಾಸ ಸಾಧ್ಯವಾಗುವುದು ಧಾರ್ಮಿಕತೆಯಿಂದ. ಧರ್ಮವೆಂದರೆ, ಆಚರಣೆ ಅಥವಾ ಪೂಜಾಕ್ರಿಯೆಗಳಲ್ಲ. ನಿಜವಾದ ಧಾರ್ಮಿಕತೆ ಇರುವುದು ಆಧ್ಯಾತ್ಮಿಕತೆಯಲ್ಲಿ. ಆಧ್ಯಾತ್ಮಿಕತೆಯೆಂದರೆ ಅಂತರಂಗದಲ್ಲಿರುವ ದಿವ್ಯತೆಯ ಅರಿವು. ಇದಕ್ಕೆ ಸಹಾಯ ಮಾಡುವುದೇ ನಿಜವಾದ ಧರ್ಮ. ೧೯೪೮–೪೯ ರಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ ಸಲ್ಲಿಸಿದ ವರದಿಯು ವಿಶ್ವವಿದ್ಯಾನಿಲಯ ಹಂತದಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣವನ್ನು ಸೇರಿಸಬೇಕೆಂದು ಶಿಫಾರಸು ಮಾಡಿತ್ತು. ಆ ವರದಿಯು ಧಾರ್ಮಿಕ ಶಿಕ್ಷಣವಿಲ್ಲದೆ ನೈತಿಕತೆಯನ್ನು ಬೋಧಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿತ್ತು. ಅದು ಹೀಗೆ ಹೇಳುತ್ತದೆ: "ನೈತಿಕತೆಯು ವಿಸ್ತಾರಭಾವವನ್ನು ತಳೆಯದ ಹೊರತು, ಅದು ಮಾತ್ರ ಸಾಕಾಗುವುದಿಲ್ಲ. ನಾವು ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಆಧ್ಯಾತ್ಮಿಕ ಶಿಕ್ಷಣವನ್ನು ಕೈಬಿಟ್ಟರೆ, ನಮ್ಮ ಪರಂಪರೆಯ ಬೆಳವಣಿಗೆಗೇ ಕಂಟಕಪ್ರಾಯರಾಗುತ್ತೇವೆ." ನಾವು ಆಧ್ಯಾತ್ಮಿಕವಾಗಿ ಮುಂದುವರೆದರೆ ನೈತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಕೂಡ ನಮ್ಮ ಜೀವನವನ್ನು ಪ್ರವೇಶಿಸುತ್ತವೆ. ಹೀಗಾಗಿ ಮೌಲ್ಯಗಳು ಇನ್ನೂ ಹೆಚ್ಚಿನ ಗಾಢವಾದ ಸಂತೃಪ್ತಿ ಅಥವಾ ಆಧ್ಯಾತ್ಮಿಕ ಸಾರ್ಥಕತೆಗೆ ಸಾಧನಗಳು ಮಾತ್ರ. ಅವು ನಮ್ಮನ್ನು ಪರಮ ಸತ್ಯದೆಡೆಗೆ ಕೊಂಡೊಯ್ಯುವ ದಾರಿದೀಪಗಳು.

## ಆಧ್ಯಾತ್ಮಿಕ ಪ್ರಗತಿ

**ನಮ್ಮೊಳಗಿರುವ ದಿವ್ಯತೆ:** ದಿವ್ಯತೆಯೇ ಮಾನವನ ನೈಜ ಸ್ವರೂಪ. ಪರಿವರ್ತನಾಶೀಲ ಮತ್ತು ನಾಶಹೊಂದುವ ಮಾನವ ದೇಹ ಮತ್ತು ಮನಸ್ಸುಗಳ ಹಿಂದೆ ಅವಿನಾಶಿಯೂ ನಿತ್ಯವೂ ಆದ ಆತ್ಮ ಇದೆ ಎಂದು ಎಲ್ಲ ಧರ್ಮಗಳೂ ಘೋಷಿಸುತ್ತವೆ. ಆ ದಿವ್ಯತೆಯೇ ನಮ್ಮ ನೈಜ ಸ್ವರೂಪ; ಅದೆ ಎಲ್ಲ ಜ್ಞಾನ, ಆನಂದ, ಉತ್ಕೃಷ್ಟತೆ, ಪರಿಪೂರ್ಣತೆ ಮತ್ತು ಪಾವಿತ್ರ್ಯಗಳ ಸೆಲೆ.

**ಆಧ್ಯಾತ್ಮಿಕ ಪ್ರಗತಿಯೆಂದರೆ ತನ್ನರಿವಿನ ವಿಕಾಸ :** ನಮ್ಮ ಚಿಂತನೆಗಳು, ಭಾವನೆಗಳು, ಮನೋಭಾವಗಳು ಮತ್ತು ಕ್ರಿಯೆಗಳು ನಮ್ಮ ಅರಿವು ಅಥವಾ ಸ್ವ–ಪ್ರಜ್ಞೆಯು ಯಾವ ಹಂತದಲ್ಲಿದೆ ಎನ್ನುವುದರ ಮೇಲೆ ಅವಲಂಬಿತವಾಗಿವೆ. ಇದನ್ನು ಸಾವಿರಾರು ವರ್ಷಗಳ ಹಿಂದೆ ನಮ್ಮ ಋಷಿಗಳು ಕಂಡುಹಿಡಿದರು. **"ಒಬ್ಬ ವ್ಯಕ್ತಿಯು ಏನನ್ನು ಪಡೆಯಲು ಬಯಸುತ್ತಾನೆ ಎನ್ನುವುದು, ಅವನು ತನ್ನನ್ನು ತಾನು ಏನೆಂದು ತಿಳಿದುಕೊಂಡಿದ್ದಾನೆ ಎನ್ನುವುದರ ಮೇಲೆ ಅವಲಂಬಿತವಾಗಿದೆ"** ಎಂದು ಶಾಸ್ತ್ರಗಳು ಘೋಷಿಸುತ್ತವೆ. ಅರಿವು ಎಂಬುದು ಕೇವಲ ದೇಹ ಮತ್ತು ಮನಸ್ಸುಗಳ ಹಂತದಲ್ಲಿ ಸೀಮಿತಗೊಂಡಾಗ, ಜೀವನದ ಬಗ್ಗೆ ಸ್ವಾರ್ಥ ಮತ್ತು ಸಂಕುಚಿತ ಮನೋಭಾವಗಳು ಬೆಳೆಯುತ್ತವೆ. ಇದರಿಂದಾಗಿ ತೀರಿಸಲಾರದಷ್ಟು ಆಸೆಗಳು, ಒತ್ತಡಗಳು ಮತ್ತು ಸಾಮರಸ್ಯದ ಕೊರತೆ ಉಂಟಾಗುತ್ತವೆ. ಆದ್ದರಿಂದ, ವೈಯಕ್ತಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಏಕೈಕ ಪರಿಹಾರವೆಂದರೆ, ನಮ್ಮ ಪ್ರಜ್ಞೆಯನ್ನು ಉದಾತ್ತಗೊಳಿಸಿಕೊಳ್ಳುವುದು. ದೇಹ–ಮನಸ್ಸುಗಳಲ್ಲಿರುವ ತಾದಾತ್ಮ್ಯ ಭಾವವನ್ನು ಮೀರಿನಿಂತು, ನಮ್ಮ ನೈಜ ಸ್ವರೂಪವನ್ನು ಪ್ರಕಟಪಡಿಸುವುದೇ ಆಧ್ಯಾತ್ಮಿಕ ಪ್ರಗತಿ ಎನ್ನಿಸಿಕೊಳ್ಳುತ್ತದೆ.

**ಆಧ್ಯಾತ್ಮಿಕ ಪ್ರಗತಿಯಿಂದ ನೈತಿಕ ಜೀವನ :** ಆಧ್ಯಾತ್ಮಿಕ ಪ್ರಗತಿಯಿಂದ ಉಂಟಾಗುವ ಮುಖ್ಯ ಪರಿಣಾಮವೆಂದರೆ, ಸ್ವಾಭಾವಿಕವಾದ ನೈತಿಕ ಜೀವನವನ್ನು ನಡೆಸಲು ಸಾಧ್ಯವಾಗುವ ಸಾಮರ್ಥ್ಯ. ಹಾಗೆ ನೋಡಿದರೆ, ನೈತಿಕ ಜೀವನ ಪ್ರಾಯೋಗಿಕವಾಗುವುದು ಆಧ್ಯಾತ್ಮಿಕ ಪ್ರಜ್ಞೆ

> ಭರತಖಂಡದ ಪ್ರಾಣಶಕ್ತಿ ಎಲ್ಲಿದೆ ಎನ್ನುವುದು ನಿಮಗೆ ಸ್ಪಷ್ಟವಾಗಿರಬಹುದು. ಅದು ಧರ್ಮದಲ್ಲಿದೆ. ಏಕೆಂದರೆ ಅದನ್ನು ಯಾರೂ ನಾಶಮಾಡದೆ ಇದ್ದುದರಿಂದ, ಈ ದೇಶಕ್ಕೆ ಎಷ್ಟೋ ಆಪತ್ತು ವಿಪತ್ತುಗಳು ಒದಗಿದ್ದರೂ ಅದು ಇನ್ನೂ ಉಳಿದಿರುವುದು. ಒಬ್ಬ ಭಾರತೀಯ ವಿದ್ವಾಂಸನು, 'ರಾಷ್ಟ್ರ ಪ್ರಾಣವನ್ನು ಧರ್ಮದಲ್ಲಿ ಇಡುವ ಆವಶ್ಯಕತೆಯೇನು? ಉಳಿದ ದೇಶಗಳಂತೆ ಅದನ್ನು ಸಾಮಾಜಿಕ ಮತ್ತು ರಾಜಕೀಯದ ಸ್ವಾತಂತ್ರ್ಯದಲ್ಲಿ ಏತಕ್ಕೆ ಇಡಬಾರದು?' ಎಂದು ಪ್ರಶ್ನಿಸುವನು. ಹೀಗೆ ಮಾತನಾಡುವುದು ಸುಲಭ... ಆದರೆ ವಾಸ್ತವಿಕ ಅಂಶ ಹೀಗಿದೆ. ಈ ನದಿಯು ತನ್ನ ಉಗಮಸ್ಥಾನವಾದ ಬೆಟ್ಟದಿಂದ ಸಾವಿರಾರು ಮೈಲಿ ಹರಿದು ಬಂದಿದೆ. ಅದನ್ನು ಪುನಃ ಬೆಟ್ಟದಮೇಲೆ ಕಳುಹಿಸುವುದಕ್ಕೆ ಆಗುವುದೆ? ಹಾಗೆ ಪ್ರಯತ್ನಿಸಿದರೆ ಪರಿಣಾಮವಾಗಿ ನೀರು ಅಲ್ಲಿ ಇಲ್ಲಿ ಹರಿದು, ವ್ಯರ್ಥವಾಗಿ, ಕೊನೆಗೆ ನದಿ ಬತ್ತಿಹೋಗುವುದು. ನದಿ ಹೇಗಾದರೂ ಸಮುದ್ರವನ್ನು ಸೇರುವುದು. ಒಂದೆರಡು ದಿನ ಮುಂಚೆಯೋ ತಡವಾಗಿಯೋ ಆಗಬಹುದು. ಶುಭ್ರ ಸುಂದರ ಸ್ಥಳದಲ್ಲಿ ಹರಿದೋ ಇಲ್ಲವೇ, ಮಲಿನವಾದ ಸ್ಥಳದಲ್ಲಿ ಹರಿದೋ ಕೊನೆಗೆ ಕಡಲನ್ನು ಸೇರುವುದು. ಹತ್ತು ಸಾವಿರ ವರುಷಗಳ ಕಾಲದ ನಮ್ಮ ರಾಷ್ಟ್ರೀಯ ಜೀವನವು ತಪ್ಪುಹಾದಿಯಲ್ಲಿ ನಡೆದಿದ್ದರೂ ಈಗ ಬೇರಾವ ಉಪಾಯವೂ ಇಲ್ಲ. ನಾವು ಈ ಸಮಯದಲ್ಲಿ ಹೊಸ ಶೀಲವನ್ನು ಸೃಷ್ಟಿಸಲು ಪ್ರಯತ್ನಿಸಿದರೆ ಅದು ಮೃತ್ಯುವಿನಲ್ಲಿ ಪರ್ಯವಸಾನವಾಗುವುದು. —ಸ್ವಾಮಿ ವಿವೇಕಾನಂದ
>
> (ಕೃ.ಶ್ರೇ.೩.೩೩೨-೩೪)

ಉಗಮವಾದಾಗಲೇ. ಸಾರ್ಥಕ ನೈತಿಕ ಜೀವನವು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬಯಸುವುದು: ೧. ನಾನು ಏತಕ್ಕಾಗಿ ಪರಿಶುದ್ಧನಾಗಬೇಕು? ೨. ನಾನು ಇತರರರಿಗೆ ಏತಕ್ಕಾಗಿ ಒಳ್ಳೆಯದನ್ನು ಮಾಡಬೇಕು? ಆಧ್ಯಾತ್ಮಿಕ ದೃಷ್ಟಿಕೋನವು ಈ ಪ್ರಶ್ನೆಗಳಿಗೆ ಹೀಗೆ ಉತ್ತರಗಳನ್ನು ನೀಡುವುದು: "ಮಾನಸಿಕ ಪರಿಶುದ್ಧತೆ ಇಲ್ಲದಿದ್ದರೆ, ನಿನ್ನ ಅಂತರಂಗದಲ್ಲಿ ಹುದುಗಿರುವ ಪರಿಪೂರ್ಣತೆ ಮತ್ತು ದಿವ್ಯತೆಗಳನ್ನು ಪ್ರಕಟಗೊಳಿಸಲು ಸಾಧ್ಯವಿಲ್ಲ." "ನೀನು ನಿನ್ನ ಸಹಜೀವಿಗಳಿಗೆ ಒಳ್ಳೆಯದನ್ನು ಮಾಡಬೇಕು. ಏಕೆಂದರೆ, ನೀನು ಮತ್ತು ಅವರು ಬೇರೆಯಲ್ಲ, ಒಂದೇ." ಈ ಉತ್ತರಗಳು ವಿಶ್ವವು ಒಂದೇ ಎಂಬ ಅಖಂಡ ಪ್ರಜ್ಞೆಯಿಂದ ಮೂಡಿಬಂದವು. ಈ ಪ್ರಪಂಚದಲ್ಲಿ ಕಾಣಬರುವ ವಿವಿಧತೆಗಳೆಲ್ಲವೂ ನಾಮ ಮತ್ತು ರೂಪಗಳಿಂದ ಉಂಟಾಗಿವೆ. ಆದರೆ ಆಧ್ಯಾತ್ಮಿಕವಾಗಿ ನೋಡಿದಾಗ, ಅತ್ಯಂತ ಕೆಳಗಿನ ಜೀವಿಯಿಂದ ಹಿಡಿದು, ಅತ್ಯಂತ ಉನ್ನತವಾದ, ಪರಿಪೂರ್ಣವಾದ ಜೀವಿಯವರೆಗೂ ಏಕರೂಪತೆ ಇರುವುದನ್ನು ನಾವು ಕಾಣಬಹುದು. ನಿಜವಾಗಿ ನೋಡಿದರೆ, ನೈತಿಕತೆ ಎನ್ನುವುದು ಈ ಏಕರೂಪತೆಯನ್ನು ಕಂಡುಹಿಡಿಯಲು ಮಾಡುವ ಹೋರಾಟವಲ್ಲದೆ ಮತ್ತೇನಲ್ಲ. ಈ ವಿಷಯವಾಗಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

> "ಆತ್ಮ ಸರ್ವವ್ಯಾಪಿ ಮತ್ತು ಏಕ ಎಂಬುದೇ ಎಲ್ಲಾ ನೀತಿಗೆ ಪ್ರಾಮಾಣ್ಯವನ್ನು ನೀಡುವಂಥದ್ದು. ನಾನು, ನೀವು ಕೇವಲ ಸಹೋದರರು ಮಾತ್ರವಲ್ಲ, ನಾನು, ನೀವು ನಿಜವಾಗಿಯೂ ಒಬ್ಬನೇ... ಇದೇ ಭಾರತೀಯ ಸಿದ್ಧಾಂತ. ಏಕತ್ವವೇ ಎಲ್ಲಾ ಅಧ್ಯಾತ್ಮಕ್ಕೆ ಮತ್ತು ನೀತಿಗೆ ಯುಕ್ತಿಯ ತಳಹದಿಯನ್ನು ಕೊಡಬಲ್ಲುದು." ( ಕೃತಿಶ್ರೇಣಿ, ೩:೧೭೬)

**ಆಧ್ಯಾತ್ಮಿಕ ದೃಷ್ಟಿಯ ಸಹಜ ಫಲಶ್ರುತಿಗಳಾಗಿ ಸಾಮಾಜಿಕ ಮೌಲ್ಯಗಳು:** ಪ್ರಪಂಚದ ಏಕರೂಪತೆಯ ಅರಿವು ಅಧಿಕವಾದಂತೆಲ್ಲ, ನಮ್ಮೊಳಗಿನ ಭಯ, ದುಃಖ, ಅಸೂಯೆ, ಕೋಪ – ಇವುಗಳು ಅರ್ಥಹೀನವಾದವು ಎಂದು ನಮಗೆ ತಿಳಿದುಬರುತ್ತದೆ. ನಮ್ಮಲ್ಲಿ ಆಂತರಿಕ ಸಾಮರಸ್ಯ ಮೂಡುತ್ತದೆ. ಅಂತರಂಗದ ಸಮತೋಲನ, ಪ್ರಶಾಂತಿ ಮತ್ತು ಸಂತಸಗಳು ಹೊರಗಡೆ ವಿಶ್ವಭ್ರಾತೃತ್ವ ಅಥವಾ ಪರಿಪಕ್ವ ಸಾಮಾಜಿಕ ಭಾವನೆಗಳಾಗಿ ಪ್ರಕಟವಾಗುತ್ತವೆ. ಈ ರೀತಿಯ ಪ್ರೀತಿಯ ಭಾವನೆಯು ನಿಃಸ್ವಾರ್ಥ ಸೇವೆ, ಧಾರ್ಮಿಕ ಉದಾರತೆ ಮತ್ತು ಶಕ್ತಿಶಾಲಿ ಪೌರ ಪ್ರಜ್ಞೆಗಳಾಗಿ ಕಾಣಿಸಿಕೊಳ್ಳುತ್ತದೆ. ಇದರಿಂದಾಗಿ, ಮಾನವೀಯ ಸಂಬಂಧಗಳು ದಿವ್ಯವಾಗುತ್ತವೆ. ಸಂತೋಷದಾಯಕವೂ ಫಲಪ್ರದವೂ ಆದ ಸಂಬಂಧಗಳನ್ನು ಬೆಳೆಸಿಕೊಳ್ಳುವ ಸಹಜ ಪ್ರವೃತ್ತಿ ನಮ್ಮಲ್ಲಿ ಉಂಟಾಗುತ್ತದೆ. ಆಗ ಸಮಾಜದಲ್ಲಿ ನಡೆಯುವ ಮಾತುಕತೆಗಳು ಮತ್ತು ವ್ಯವಹಾರಗಳನ್ನು ಕಪಟವಿಲ್ಲದೆ, ಇತರರ ಬಗ್ಗೆ ನಿಜವಾದ ಕಳಕಳಿಯಿಂದ ಕೈಗೊಳ್ಳಲು ನಮಗೆ ಸಾಧ್ಯವಾಗುತ್ತದೆ. ಆಗ, ಕೆಲಸದಲ್ಲಿ ನೈತಿಕತೆಯನ್ನೂ, ದಕ್ಷತೆಯನ್ನೂ, ವೈಯಕ್ತಿಕ ಗೌರವವನ್ನೂ ಕಾಪಾಡಿಕೊಳ್ಳಬಹುದು. ಸಾಮಾಜಿಕ ಮೌಲ್ಯಗಳು ಆಧ್ಯಾತ್ಮಿಕ ಪ್ರಗತಿಯಿಂದ ಬರುತ್ತವೆ ಎನ್ನುವುದು ನಮಗೆ ಇದರಿಂದ ಮನದಟ್ಟಾಗುತ್ತದೆ. ಅದಕ್ಕೆಂದೇ ಸ್ವಾಮಿ ವಿವೇಕಾನಂದರು "ನಾಗರಿಕತೆಯು ಮಾನವನ ದಿವ್ಯತೆಯ ಪ್ರಕಟನೆಯೇ ಆಗಿದೆ" ಎಂದು ಹೇಳಿದ್ದಾರೆ.

**ಆಧ್ಯಾತ್ಮಿಕ ಪ್ರಗತಿಯೇ ಎಲ್ಲ ವ್ಯಾಧಿಗಳಿಗೆ ಔಷಧಿ:** ಭಾರತದ ರಾಷ್ಟ್ರೀಯ ಜೀವನದ ಕೇಂದ್ರಶಕ್ತಿ ಎಂದರೆ ಧರ್ಮ. ಇದು ಬಹಳ ಸಹಜವಾದದ್ದು ಮತ್ತು ಯಾವುದೇ ಸಾಮಾಜಿಕ ಪರಿವರ್ತನೆಗೆ ಅವಶ್ಯವಾಗಿ ಬೇಕಾದ ಶಕ್ತಿಯುತ ಮಾಧ್ಯಮ. ನಮ್ಮ ದೇಶದ ಕಲ್ಯಾಣಕ್ಕಾಗಿ ನಾವು ಆ ಕೇಂದ್ರಶಕ್ತಿಯಿಂದ ಸತ್ವವನ್ನು ಹೀರಿಕೊಳ್ಳಬೇಕು. ನಮ್ಮ ರಾಷ್ಟ್ರೀಯ ಜೀವನವು ಆಧ್ಯಾತ್ಮಿಕತೆಯಿಂದ ದೂರ ಸರಿದರೆ, ಸಮಗ್ರವಾಗಿ ಅದೊಂದು ಅನೈಸರ್ಗಿಕ ಬೆಳವಣಿಗೆಯಾಗುವುದರೊಂದಿಗೆ, ಸಾಮಾಜಿಕ ಅಧಃಪತನಕ್ಕೆ ಅನುವು ಮಾಡಿಕೊಡುತ್ತದೆ. ಇದಕ್ಕೆಂದೇ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ:

> "ಪ್ರತಿಯೊಂದು ದೇಶಕ್ಕೂ ಸ್ವಾಭಾವಿಕವಾಗಿ ಅದರದೇ ಆದ ವೈಶಿಷ್ಟ್ಯ ಮತ್ತು ವೈಯಕ್ತಿಕತೆಗಳು ಇವೆ. ಸರ್ವರಾಷ್ಟ್ರಗಳ ಸ್ವರಮೇಳದಲ್ಲಿ ಪ್ರತಿಯೊಂದು ದೇಶವೂ ಒಂದೊಂದು ರಾಗದಂತೆ ಇದೆ. ಇದೇ ಅದರ ಜೀವಾಳ, ಸಾರ. ಇದೇ ಅದರ ಬೆನ್ನುಲುಬು; ಅದರ ರಾಷ್ಟ್ರ ಜೀವನದ ತಳಹದಿ. ಧರ್ಮವು ಮಾತ್ರವೇ ಈ ದೇಶದ ಬೆನ್ನೆಲುಬು, ತಳಹದಿ ಮತ್ತು ಜೀವನದ ಕೇಂದ್ರ." (ಕೃತಿಶ್ರೇಣಿ, ೩:೩೮)

**ಆಧ್ಯಾತ್ಮಿಕ ಮನೋಭಾವವುಳ್ಳ ಪ್ರಜೆಗಳ ಆವಶ್ಯಕತೆ:** ಈ ದೇಶದ ಜೀವದಾಯಿನಿಯಾದ ಆಧ್ಯಾತ್ಮಿಕತೆಯನ್ನು ಸಶಕ್ತಗೊಳಿಸುವ ಕಾರ್ಯ ನೈತಿಕತೆಯ ಪಾಲನೆಯಲ್ಲಿ ನಿಷ್ಠಾವಂತರಾಗುವುದರಿಂದ ಮಾತ್ರ ಸಾಧ್ಯ. ನಮ್ಮ ಸಮಾಜದ ಪುನರುಜ್ಜೀವನವು ಆಧ್ಯಾತ್ಮಿಕ ಮನೋಭಾವವುಳ್ಳ ವ್ಯಕ್ತಿಗಳ ಸಂಖ್ಯೆಯ ಹೆಚ್ಚಳದ ಮೇಲೆ ಅವಲಂಬಿತವಾಗಿದೆ. ಅಂತಹ ಸ್ತ್ರೀಪುರುಷರು ಮಾತ್ರವೇ ಆಧ್ಯಾತ್ಮಿಕತೆಯನ್ನು ದಿನನಿತ್ಯದ ಜೀವನದಲ್ಲಿ ಅನುಷ್ಠಾನಕ್ಕೆ ತರಬಲ್ಲರು ಮತ್ತು ಸಾಮಾಜಿಕ ಪುನರುಜ್ಜೀವನದ ಹರಿಕಾರರಾಗಬಲ್ಲರು. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

> "ಎಲ್ಲಿ ಅತ್ಯುನ್ನತ ಸತ್ಯಗಳು ಅನುಷ್ಠಾನಗೊಳ್ಳುತ್ತವೆಯೋ ಆ ಸಮಾಜವೇ ಶ್ರೇಷ್ಠವಾದುದು. ಸಮಾಜವು ಆ ಉನ್ನತ ಸತ್ಯಗಳಿಗೆ ತಯಾರಾಗಿಲ್ಲದಿದ್ದರೆ, ಹಾಗೆ ಮಾಡಿ. ಅದನ್ನು ಆದಷ್ಟು ಬೇಗ ಮಾಡಿದಷ್ಟೂ ಒಳ್ಳೆಯದು."

**(ಕೃಪೆ: Parents and Teachers in Value Education, Publisher: Ramakrishna Mission, Belur Math)**

**(ಮುಂದಿನ ತಿಂಗಳ ವಿಷಯ : ನಮ್ಮ ಮಕ್ಕಳಿಗೆ ನಾವು ಆದರ್ಶವಾಗುವುದು ಹೇಗೆ? )** *(ಭಾವಾನುವಾದ: ಸಂ.)*